# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ಸಿ ನಂ. 10/2019**

**ದೋ.ಸಾ. : 19 ಪ್ರಾ.ಸಾ. : 3**

ಸಾಕ್ಷಿಯ ಹೆಸರು : ರಾಜೇಶ ಗಂಗಾಧರ ನಾಯರ್
ತಂದೆಯ ಹೆಸರು : ಗಂಗಾಧರ ನಾಯರ್
ವಯಸ್ಸು : 52 ವರ್ಷ
ಕೆಲಸ : ಸೀಬರ್ಡ ನಲ್ಲಿ ಕೆಲಸ
ವಾಸ : ಬೈತಕೂಲ, ಕಾರವಾರ

**ದಿನಾಂಕಃ 10-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ಪ್ರೇಮಕುಮಾರ ನನ್ನ ತಮ್ಮ. ಚಾಸಾ-1 ಮೃತ ಪ್ರೇಮಕುಮಾರನ ಮಾವ. ಚಾಸಾ-20 ಮೃತ ಪ್ರೇಮಕುಮಾರನ ಹೆಂಡತಿಯ ತಮ್ಮ. ಚಾಸಾ-21 ಮೃತ ಪ್ರೇಮಕುಮಾರನ ಹೆಂಡತಿ. ಮೃತ ಪ್ರೇಮಕುಮಾರ ಬೈತಕೂಲನ ಪೋರ್ಟ್ ಕಾಲೋನಿಯಲ್ಲಿ, ಹೆಂಡತಿ ಮತ್ತು 4 ವರ್ಷದ ಮಗಳೊಂದಿಗೆ ವಾಸವಾಗಿದ್ದ. ನಾವು ನಮ್ಮ ತಂದೆ ತಾಯಿಗೆ ಒಟ್ಟು 6 ಜನ ಮಕ್ಕಳು, ನಾವು ಪ್ರತ್ಯೇಕವಾಗಿ ವಾಸವಾಗಿರುತ್ತೇವೆ. ನನ್ನ ತಂದೆ ತಾಯಿ ನನ್ನ ಜೊತೆಯಲ್ಲಿ ವಾಸವಾಗಿದ್ದರು. ನನ್ನ ತಂದೆ ಹೀಗೆ 2 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿಯ ಹೆಸರು ಸರೋಜಿನಿ. 1 ನೇ ಆರೋಪಿ ಕಳೆದ 40 ವರ್ಷಗಳಿಂದ ನನಗೆ ಪರಿಚಯ, ಆತ ನಮ್ಮ ಮನೆಗೆ ಹಾಗೂ ನಾವು ಅವರ ಮನೆಗೆ ಬಂದು ಹೋಗಿ ಮಾಡುತ್ತಿದ್ದೇವು. 1 ನೇ ಆರೋಪಿ ಮೃತ ಪ್ರೇಮಕುಮಾರನ ಸ್ನೇಹಿತ. 2 ನೇ ಆರೋಪಿ ಸಹ ಮೃತ ಪ್ರೇಮಕುಮಾರನ ಸ್ನೇಹಿತ ಹಾಗೂ ನಮ್ಮ ಮನೆಗೆ ಬಂದು ಹೋಗುವುದು ಮಾಡುತ್ತಿದ್ದ. ಮೃತ ಪ್ರೇಮಕುಮಾರ ಬಂದರಿನಲ್ಲಿ ಕೆಲಸ ಮಾಡುತ್ತಿದ್ದ. 1 ನೇ ಆರೋಪಿ ಸಹ ಬಂದರಿನಲ್ಲಿ ಕೆಲಸ ಮಾಡುತ್ತಿದ್ದ. ನಂತರ 1 ನೇ ಆರೋಪಿ ಹಾಗೂ ಮೃತ ಪ್ರೇಮಕುಮಾರ ಇಬ್ಬರೂ ಸೇರಿ ಹೊಸದಾಗಿ ಶಿಪ್ಪಿಂಗ್ ಕಂಪೆನಿಯನ್ನು ತೆರೆಯಲು ಮಾತನಾಡಿಕೊಂಡಿದ್ದು, ಲೈಸೆನ್ಸ ಸಿಕ್ಕ ಬಳಿಕ 1 ನೇ ಆರೋಪಿ ಮೃತ ಪ್ರೇಮಕುಮಾರನಿಗೆ ನಾನೊಬ್ಬನೇ ಕಂಪೆನಿಯನ್ನು ನಡೆಸುವುದಾಗಿ ಹೇಳಿದ್ದು, ನಂತರ ಮೃತ ಪ್ರೇಮಕುಮಾರ ಮಂಗಳೂರಿನ ಪೊಯಿನೂರು ಶಿಪ್ಪಿಂಗ್

ಎಜೆನ್ಸಿಯೊಂದಿಗೆ ಕಾರವಾರದಲ್ಲಿ ಕೆಲಸ ಮಾಡುತ್ತಿರುತ್ತಾನೆ. ಆನಂತರ 1 ವರ್ಷಗಳವರೆಗೆ 1 ನೇ ಆರೋಪಿಗೆ ಯಾವುದೇ ಕಾಂಟ್ರ್ಯಾಕ್ಟ್ ಕೆಲಸ ಬಂದಿರುವುದಿಲ್ಲ ಹಾಗೂ ಮೃತ ಪ್ರೇಮಕುಮಾರನಿಗೆ ನಿರಂತರವಾಗಿ ಕೆಲಸ ಬಂದಿರುತ್ತದೆ. 2 ನೇ ಆರೋಪಿ ಪ್ರೇಮಕುಮಾರನ ಹತ್ತಿರ ಕೆಲಸಕ್ಕಾಗಿ ಬರುತ್ತಿದ್ದ ಹಾಗೂ ಅಲ್ಲಿ ನಡೆಯುತ್ತಿದ್ದ ಎಲ್ಲಾ ವ್ಯವಹಾರದ ಮಾಹಿತಿಯನ್ನು 1 ನೇ ಆರೋಪಿಗೆ ತಿಳಿಸುತ್ತಿದ್ದ. ಆದ್ದರಿಂದ 1 ನೇ ಆರೋಪಿಯು ಪ್ರೇಮಕುಮಾರನನ್ನು ಹೀಗೆ ಬಿಟ್ಟರೆ ನಮ್ಮ ಕಂಪೆನಿ ನಿಂತು ಹೋಗುತ್ತದೆ ಎಂದು ದ್ವೇಷ ಮಾಡುತ್ತಿರುತ್ತಾನೆ.

2. ಆನಂತರ ದಿನಾಂಕ 16.10.2018 ರಂದು ರಾತ್ರಿ 11.30 ಗಂಟೆಗೆ ಪ್ರೇಮಕುಮಾರ ಹೆಂಡತಿ ಚಾಸಾ–21 ರವರು ನನಗೆ ಕರೆ ಮಾಡಿ ಪ್ರೇಮಕುಮಾರ ಇನ್ನೂ ಮನೆಗೆ ಬಂದಿರುವುದಿಲ್ಲ, ಹಾಗೂ ಆತ ತನ್ನ ಮೊಬೈಲ್ ಕರೆಗಳನ್ನು ಸ್ವೀಕರಿಸುತ್ತಿಲ್ಲ ಎಂದು ಹೇಳಿರುತ್ತಾಳೆ. ಆಗ ನಾನು ಆಕೆಗೆ ಯಾವಾಗ ಹಾಗೂ ಯಾರ ಸಂಗಡ ಹೋಗಿದ್ದ ಎಂದು ಕೇಳಿದಾಗ, ಆಕೆ 2 ನೇ ಆರೋಪಿಯೊಂದಿಗೆ ಮಧ್ಯಾಹ್ನ 2.00 ಗಂಟೆಗೆ ತನ್ನ ದ್ವಿಚಕ್ರ ವಾಹನದಲ್ಲಿ ಕದ್ರಾಗೆ ಹೋಗಿ ಬರುತ್ತೇನೆ ಎಂದು ಹೇಳಿ ಹೋದರು ಎಂದು ತಿಳಿಸಿರುತ್ತಾಳೆ. ಆಗ ನಾನು ಪ್ರೇಮಕುಮಾರನ ಮೊಬೈಲ್ ಗೆ ಕರೆ ಮಾಡಿದ್ದು, ಆತ ಕರೆಗಳನ್ನು ಸ್ವೀಕರಿಸಿರುವುದಿಲ್ಲ, ಆದ್ದರಿಂದ ನಾನು 2 ನೇ ಆರೋಪಿಗೂ ಸಹ ಕರೆಗಳನ್ನು ಮಾಡಿದ್ದು, ಆತನೂ ಸಹ ಕರೆಗಳನ್ನು ಸ್ವೀಕರಿಸಿರುವುದಿಲ್ಲ. ಆದ್ದರಿಂದ ಅದೇ ದಿನ ರಾತ್ರಿ ನಾನು, ಪ್ರೇಮಕುಮಾರನ ಮಾವ ಚಾಸಾ–1, ಚಾಸಾ–20, ಇನ್ನಿಬ್ಬರು ಎಲ್ಲಾ ಸೇರಿ ಕಾರವಾರ ನಗರ ಪೊಲೀಸ ಠಾಣೆ ಗೆ ಹೋಗಿ ಪ್ರೇಮಕುಮಾರ ಮನೆಗೆ ಬಂದಿಲ್ಲದ ವಿಚಾರ ಹೇಳಿದ್ದು, ಪೊಲೀಸರು ಮರುದಿನ ಬೆಳಿಗ್ಗೆ ಬರುವಂತೆ ಹೇಳಿ ಕಳಿಸಿರುತ್ತಾರೆ. ಆದ್ದರಿಂದ ನಾನು, ಚಾಸಾ–1, ಚಾಸಾ–20 ರವರು ಮರುದಿನ ಬೆಳಿಗ್ಗೆ ಸಹ ಪೊಲೀಸ ಠಾಣೆಗೆ ಹೋಗಿದ್ದು ಅಲ್ಲಿ ಚಾಸಾ–1 ರವರು ಪ್ರೇಮಕುಮಾರ ಕಾಣೆಯಾದ ಬಗ್ಗೆ ದೂರನ್ನು ನೀಡಿರುತ್ತಾರೆ. ದೂರು ದಾಖಲಾದ ನಂತರ ಪೊಲೀಸರು ಪ್ರೇಮಕುಮಾರನ ಮೊಬೈಲ್ ನಂಬರ್ ಪಡೆದುಕೊಂಡು ಅದರ ಲೊಕೇಶನ್ ನ್ನು ನೋಡಿದಾಗ ಆತನ ಲೋಕೇಶನ್ ನೋಡಿದಾಗ ಅದು ಉಳವಿಯಲ್ಲಿ ಕಂಡಬಂದಿರುತ್ತದೆ. ಆನಂತರ ಅದು ಖಾನಾಪುರ, ಬೆಳಗಾವಿ, ಮಹಾರಾಷ್ಟ್ರ ಸತಾರಾದಲ್ಲಿ ಕಂಡುಬಂದಿರುತ್ತದೆ.

3. ಅದೇ ದಿನ ರಾತ್ರಿ ನಾನು, ಚಾಸಾ–20, ಪ್ರೇಮಕುಮಾರನ 2 ಜನ ಸ್ನೇಹಿತರು ಹಾಗೂ ಎರಡು ಜನ ಪೊಲೀಸರು ಕಾರಿನ ಮೇಲಾಗಿ ಸತಾರಾಕ್ಕೆ ದಿಃ 18.10.2018 ರಂದು ಬೆಳಿಗ್ಗೆ 8.00 ಗಂಟೆಗೆ ಹೋಗಿ, ಅಲ್ಲಿನ ಪೊಲೀಸ್ ರಿಗೆ ಮಾಹಿತಿ ನೀಡಿ ಅವರನ್ನು ನಮ್ಮ ಜೊತೆಯಲ್ಲಿನ

ಕರೆದುಕೊಂಡು ಪ್ರೇಮಕುಮಾರನ ಮೊಬೈಲ್ ನ ಲೊಕೇಶನ್ ತೋರಿಸುತ್ತಿದ್ದ ಜಾಗಕ್ಕೆ ಹೋಗಿರುತ್ತೇವೆ. ಆದರೆ ಆ ಜಾಗದಲ್ಲಿ ಯಾರೂ ಇರಲಿಲ್ಲ ಹಾಗೂ ಆತನ ಮೊಬೈಲ್ ಸಹ ಸಿಗಲಿಲ್ಲ. ಆದ್ದರಿಂದ ಪೊಲೀಸರು ಕಾರವಾರ ನಗರ ಠಾಣೆಗೆ ಪೊಲೀಸರಿಗೆ ವಿಷಯ ತಿಳಿಸಿ ವಾಪಸ್ಸು ಬರುವಾಗ ರಾತ್ರಿ 9.00 ಗಂಟೆಗೆ ಬೆಳಗಾವಿಗೆ ಬಂದಾಗ, ನಗರ ಠಾಣೆಯ ಪಿ.ಎಸ್.ಐ. ರವರು ತಮ್ಮ ಸಿಬ್ಬಂದಿಗೆ ಕರೆ ಮಾಡಿ ನಮಗೆ ಕೊಲ್ಲಾಪುರಕ್ಕೆ ಹೋಗಲು ತಿಳಿಸಿರುತ್ತಾರೆ. ಅದರಂತೆ ನಾವು ವಾಪಸ್ಸ ಕೊಲ್ಲಾಪುರಕ್ಕೆ ಹೊರಟು ದಿಃ 19.10.2018 ರಂದು ಬೆಳಿಗ್ಗೆ 7.00 ಗಂಟೆಗೆ ಮುಟ್ಟಿರುತ್ತೇವೆ. ನಾವು ಅಲ್ಲಿಗೆ ಹೋದ ನಂತರ ಕಾರವಾರ ನಗರ ಠಾಣೆಯ ಪಿ ಎಸ್ ಐ ರವರು ತಮ್ಮ ಸಿಬ್ಬಂದಿಗೆ ಕರೆ ಮಾಡಿ, 2 ನೇ ಆರೋಪಿಯು ಕೊಲ್ಲಾಪುರದ ಒಂದು ಟ್ರಾವೆಲ್ ಎಜೆಂಟ್ ರವರಿಂದ ತನ್ನ ಹೆಂಡತಿಗೆ ಕರೆ ಮಾಡಿ ಮಾತನಾಡಿದ್ದು, ಆತನ ಹೆಂಡತಿ ಟ್ರಾವೆಲ್ ಎಜೆಂಟ್ ರವರ ಮೊಬೈಲ್ ನಂಬರ ನೀಡಿದ್ದು, ಅದನ್ನು ತಮ್ಮ ಸಿಬ್ಬಂದಿಗೆ ನೀಡಿ ಟ್ರಾವೆಲ್ ಎಜೆಂಟ್ ರವರನ್ನು ವಿಚಾರಿಸುವಂತೆ ಹೇಳಿರುತ್ತಾರೆ. ಅದರಂತೆ ನಾವು ಟ್ರಾವೆಲ್ ಎಂಜೆಂಟ್ ಹತ್ತಿರ ವಿಚಾರಿಸಿದಾಗ, ಆತ "ಮುಸ್ತಾಕ್ ಎನ್ನುವ ವ್ಯಕ್ತಿ ನಮ್ಮ ಟ್ರಾವೆಲ್ ಎಜೆನ್ಸಿಗೆ ಬಂದು ಕೊಲ್ಲಾಪುರದಿಂದ ಮುಂಬೈಗೆ ಟಿಕೆಟ್ ಬುಕ್ ಮಾಡಿರುತ್ತಾನೆ ಹಾಗೂ ನನ್ನ ಬಳಿ ಫೋನ್ ತೆಗೆದುಕೊಂಡು ಮೊದಲನೇ ಕರೆಯನ್ನು ತನ್ನ ಹೆಂಡತಿಗೆ ಮಾಡಿ, ಸುಮಾರು 15 ನಿಮಿಷ ಮಾತನಾಡಿರುತ್ತಾನೆ, ಆನಂತರ 2 ನೇ ಕರೆಯನ್ನು 1 ನೇ ಆರೋಪಿಗೆ ಮಾಡಿರುತ್ತಾನೆ ಹಾಗೂ 3 ನೇ ಕರೆಯನ್ನು ಚಾಸಾ-32 ವಹೀದ್ ರವರಿಗೆ ಕರೆ ಮಾಡಿರುತ್ತಾನೆ" ಎಂದು ಹೇಳಿರುತ್ತಾರೆ.

**ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ